ಹೇಳಿದ್ದಾರೆ, ನಮ್ಮ ಮಲೆನಾಡು ಹಳ್ಳಿಗಳ ದುರಂತ ಎಂದರೆ ಒಂದು ಗ್ರಾಮ ಅಂದರೆ ಅದರ ಸುತ್ತ ಮುತ್ತ ಏಳೆಂಟು ಹ್ಯಾಮ್ಲೆಟ್‌ಗಳು ಇರುತ್ತವೆ. ಇವರು ಲೆಕ್ಕಕ್ಕೆ ಮುಖ್ಯ ಗ್ರಾಮ ತೋರಿಸಿ ಅದರ ಸುತ್ತಮುತ್ತಲಿನ ಹ್ಯಾಮ್ಲೆಟ್‌ಗಳಿಗೆ ವಿದ್ಯುತ್ ಕೊಡದಿದ್ದರೆ ಬಹುಭಾಗ ವಿದ್ಯುತ್‌ನಿಂದ ವಂಚಿತವಾಗುತ್ತಾರೆ. ಉದಾಹರಣೆಗೆ ದಾರದಳ್ಳಿ ಗ್ರಾಮದ ಸುತ್ತಮುತ್ತ ಹೀಗೇ ಆಗಿದೆ. ಆದ್ದರಿಂದ ಇವರು ಲಿಸ್ಟ್ಸ್ ಕೊಟ್ಟಿರುವ ಹಳ್ಳಿಗಳಲ್ಲೆಲ್ಲ ಹ್ಯಾಮ್ಲೆಟ್‌ಗಳನ್ನೂ ಒಳಪಡಿಸಿದ್ದಾರೆಯೇ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ ೨೬,೪೮೩ ರೆವಿನ್ಯೂ ವಿಲೇಜಸ್ ಇದೆ. ರೂರಲ್ ಎಲೆಕ್ಟ್ರಿಫಿಕೇಷನ್ ಸ್ಕೀಮ್ ಪ್ರಕಾರ ಎಲ್ಲಾ ಕಡೆ ಬಂದಿದೆ. ಹೆಚ್ಚಾಗಿ ಮಲೆನಾಡಿನಲ್ಲಿ ಖಂಡಿತವಾಗಿ ತೃಪ್ತಿಕರವಾಗಿ ಇಲ್ಲ. ೫೫-೬೦ ಮನೆಗೆ ಎಲ್ಲಾದರೂ ಗ್ರಾಮದಲ್ಲಿ ವಿಲೇಜ್‌ನಲ್ಲಿ ಕೊಟ್ಟಿಗೆ ಅದು ನಮ್ಮ ಲೆಕ್ಕದ ಪ್ರಕಾರ ಎಲ್ಲಾ ಕಡೆ ಬಂದಿದೆ ಎಂದು ಇದೆ. ಈ ಸ್ಕೀಮ್ ಪ್ರಕಾರ ಅದು ಆಗಿದೆ. ಆದರೆ ಇದರಿಂದ ಮಲೆನಾಡಿನ ಜನರಿಗೆ ತೃಪ್ತಿ ಆಗುವುದಿಲ್ಲ. ಏಕೆಂದರೆ ಮನೆಗಳು ದೂರ ದೂರ ಇವೆ. ಆದಕ್ಕಾಗಿ ಸರ್ಕಾರಕ್ಕೆ ಹ್ಯಾಮ್ಲೆಟ್‌ಗೆ ಸಹ ವಿದ್ಯುತ್ ಒದಗಿಸಿಕೊಡಬೇಕೆಂಬ ಇಚ್ಛೆ ಇದೆ. ಮಲೆನಾಡಿನಲ್ಲಿ ಮನೆಗಳು ಬಹಳ ದೂರ ಇರುವುದರಿಂದ ಖರ್ಚು ಬಹಳ ಹೆಚ್ಚು ಆಗುತ್ತದೆ. ಒಂದು ಎರಡು ಕಂಬವಲ್ಲ, ೨೦-೩೦ -೪೦ ಕಂಬಗಳನ್ನು ಹಾಕಬೇಕಾಗುತ್ತದೆ. ಸರ್ಕಾರದ ಹಣಕಾಸಿನ ಸ್ಥಿತಿ ತೊಂದರೆ ಇರುವುದರಿಂದ ಅಂತೂ ಹ್ಯಾಮ್ಲೆಟ್‌ಗೆ ವಿದ್ಯುತ್ ಕೊಡಬೇಕೆಂದು ಇಚ್ಛೆ ಇದೆ. ಅದಕ್ಕಾಗಿ ನಾವು ಬ್ಯಾಂಕಿನ ಹತ್ತಿರ, ಫೈನಾನ್ಸಿಯಲ್ ಏಜೆನ್ಸಿಗಳ ಹತ್ತಿರ ಮಾತನಾಡುತ್ತಿದ್ದೇವೆ. ಬ್ಯಾಂಕಿನ ಮುಖಾಂತರ ಹಾಗೂ ಇತರ ಬಾಬಿನ ಮುಖಾಂತರ ಇನ್ನೂ ಹೆಚ್ಚಿನ ಹಣವನ್ನು ತೆಗೆದುಕೊಂಡು ರೂರಲ್ ಎಲೆಕ್ಟ್ರಿಫಿಕೇಷನ್ ಅನ್ನು ಹ್ಯಾಮ್ಲೆಟ್‌ಗಳಿಗೆ, ಹರಿಜನ ಬಸ್ತಿಗಳಿಗೂ ಮತ್ತಿತರ ತಾಂಡಾಗಳಿಗೂ ಕೊಡಬೇಕೆಂದು ಸರ್ಕಾರದ ಇಚ್ಛೆ ಇದೆ.

ಶ್ರೀಮತಿ ಮೋಟಮ್ಮ.—ಇಲ್ಲಿ ಪರಿಸ್ಥಿತಿ ಏನು ಆಗಿದೆ ಅಂದರೆ ಮಲೆನಾಡು ಪ್ರದೇಶದಲ್ಲಿ ಗವರ್ನ್‌ಮೆಂಟಿನ ಒಂದು ಡೈರೆಕ್ಷನ್ ಇದೆ, ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುದ್ದೀಕರಣ ಮಾಡಬೇಕಾದರೆ ೪೦ ಸಾವಿರ ರೂಪಾಯಿಗೆ ಒಳಪಟ್ಟ ಎಸ್ಟಿಮೇಟ್ ಇದ್ದರೆ ಮಾತ್ರ ತಕ್ಷಣ ಎಲೆಕ್ಟ್ರಿಫಿಕೇಷನ್‌ಗೆ ತೆಗೆದುಕೊಳ್ಳಿ, ಅದಕ್ಕಿಂತ ಮೇಲ್ಪಟ್ಟ ಅಮೌಂಟ್ ಇದ್ದರೆ ೪೦ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಇದ್ದರೆ ವಿದ್ಯುದ್ದೀಕರಣ ಪದ್ಧತಿಗೆ ತೆಗೆದುಕೊಳ್ಳಬಾರದೆಂದು ಆದೇಶ ನೀಡಲಾಗಿದೆ. ಇದರಿಂದ ಏನಾಗಿದೆಯೆಂದರೆ, ನಮ್ಮ ಮಲೆನಾಡಿನ ಮೂಲೆ ಭಾಗಗಳಿಗೆ ನಿಜವಾಗಿ ವಿದ್ಯುತ್ ಅನ್ನು ಒದಗಿಸುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಆದ್ದರಿಂದ ಇದನ್ನು ಏನಾದರೂ ರಿಲ್ಯಾಕ್ಸ್ ಮಾಡುವುದಕ್ಕೆ ಆಗುತ್ತದೆಯೇ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಯಾವುದೇ ಒಂದು ಸ್ಕೀಮ್ ಮಾಡಬೇಕಾದರೆ ಅದರ ಒಂದು viability ಯನ್ನು ನೋಡಬೇಕಾಗುತ್ತದೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಮಾಡಬೇಕಾಗುತ್ತದೆ. ಮಲೆನಾಡು ಪ್ರದೇಶದಿಂದ ನಾನು ಕೂಡ ಬಂದಿರುವುದರಿಂದ ಇನ್ನು ಮುಂದೆ ಹೆಚ್ಚಿನ ಪ್ರಮಾಣದಲ್ಲಿ ಹ್ಯಾಮ್ಲೆಟ್‌ಗಳಿಗೆ ವಿದ್ಯುತ್ ಸರಬರಾಜು ಹೋಗುವ ರೀತಿಯಲ್ಲಿ ನಾವು ಕೆಲಸ ಮಾಡುತ್ತೇವೆ.

SRI M. V. VENKATAPPA.—Why discrimination between Maidan and Malnad ?

MR. SPEAKER.—Because Malnad is Malnad:

SRI S. M. YAHYA.—Obviously the Hon'ble Member knows about it. There will be distance between house to house. This is what is called reasonable discrimination which is permitted.

ರೋಗಗ್ರಸ್ತ ಕೈಗಾರಿಕಾ ಘಟಕಗಳ ಬಗ್ಗೆ

೬೨೧. ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ೧೫-೪-೯೦ರವರೆಗೆ ರಾಜ್ಯದಲ್ಲಿ ಎಷ್ಟು ಮಧ್ಯಮ ಮತ್ತು ಭಾರೀ ಕೈಗಾರಿಕೆಗಳು ರೋಗಗ್ರಸ್ತಗಳಾಗಿವೆ ?

೨. ಈ ಕೈಗಾರಿಕೆಗಳಿಗಾಗಿ ಎಷ್ಟು ಹಣವನ್ನು ಹಾಕಲಾಗಿದೆ ?

೩. ಈ ತರಹದ ಕೈಗಾರಿಕೆಗಳು ಹಣಕಾಸು ಸಂಸ್ಥೆಗಳಿಂದ ಎಷ್ಟು ಹಣವನ್ನು ಪಡೆದಿರುತ್ತದೆ

೪. ಈ ತರಹದ ಕೈಗಾರಿಕೆಗಳು ಎಷ್ಟು ಮುಚ್ಚಲ್ಪಟ್ಟಿವೆ ?

೫. ಈ ತರಹದ ಕೈಗಾರಿಕೆಗಳಲ್ಲಿ ಎಷ್ಟು ಕೈಗಾರಿಕೆಗಳನ್ನು ಪುನರ್‌ಜೀವನಗೊಳಿಸಬಹುದು ?

೬. ಈ ತರಹದ ಕೈಗಾರಿಕೆಗಳಲ್ಲಿ ಎಷ್ಟು ಕೈಗಾರಿಕೆಗಳನ್ನು ಪುನರ್ ಜೀವನಗೊಳಿಸಲು ಹಣ ಆಗುವುದಿಲ್ಲ ಮತ್ತು ಎಷ್ಟು ಹಣ ವಿನಿಯೋಗವಾಗಿದೆ ?

ಶ್ರೀ ಎಸ್. ಎಂ. ಯಾಹ್ಯಾ (ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು).—

೧ ೫೬

೨. ರೂ. ೨೧.೦೫ಳ ಲಕ್ಷಗಳು

೩. ರೂ. ೨೦.೭೪೧ ಲಕ್ಷಗಳು

೪. ೧೬

೫. ಬೋರ್ಡ್ ಫಾರ್ ಇಂಡಸ್ಟ್ರಿಯಲ್ ಆಂಡ್ ಫೈನಾನ್ಸಿಯಲ್ ರಿಕನ್‌ಸ್ಟ್ರಕ್ಷನ್‌ನವರು ಅಂತಿಮ ತೀರ್ಮಾನ ನೀಡಿದ ನಂತರ ೧೪ ಘಟಕಗಳನ್ನು ಪುನರುಜ್ಜೀವನಗೊಳಿಸಲಾಗುವುದು.

೬. ೨ ಘಟಕ (ಒಟ್ಟು ರೂ. ೧,೯೨೬ ಲಕ್ಷಗಳು)

ಶ್ರೀ ಸಿ. ಬೈರೇಗೌಡ.—ನಾನು each category ಎಂದು ಕೇಳಿದ್ದೇನೆ. ಯಾವ ಯಾವ ಕ್ಯಾಟಗರಿಯಲ್ಲಿ ಎಷ್ಟೆಷ್ಟು ನಷ್ಟ ಆಗಿದೆ ಎಂದು ಹೇಳುವುದಕ್ಕಾಗುತ್ತದೆಯೇ ನನ್ನ ಎರಡನೇ ಉಪ ಪ್ರಶ್ನೆಯನ್ನು ಓದಿದರೆ ಅರ್ಥವಾಗುತ್ತದೆ. The amount invested in each category of industries ಎಂದು ಕೇಳಿದ್ದೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಅದು ಎಲ್ಲ ಸಂಗ್ರಹಣೆ ಮಾಡಿ ಕೊಡಬಹುದು. ಅದಕ್ಕೆ ಬೇಕಾದಷ್ಟು ಸಮಯ ತೆಗೆದುಕೊಳ್ಳುವುದರಿಂದ ಅದನ್ನು ನಾವು ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಸಿ.ಬೈರೇಗೌಡ.—ನಾನು ಈ ಪ್ರಶ್ನೆಯನ್ನು ಕೇಳಿದ ಉದ್ದೇಶವೇನೆಂದರೆ, ರೈತರಿಗೆ ಏನಾದರೂ ಸ್ವಲ್ಪ ಸವಲತ್ತು ಕೊಡಿ ಎಂದರೆ ಸರ್ಕಾರ ಕಲ್ಲಿಗಿಂತ ಗಟ್ಟಿಯಾಗಿ ನಿಂತುಕೊಳ್ಳುತ್ತದೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿರುವ ಕಾರ್ಖಾನೆಗಳು ಏನು ಆಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಮತ್ತು ಯಾವ ಯಾವ ವಿಧವಾದಂಥ ಕಾರ್ಖಾನೆಗಳು ಎಂದು ನಾನು ಕೇಳಿರತಕ್ಕದ್ದು. ಅದರಿಂದ ದಯವಾಡಿ ತಾವು ಇದನ್ನು ಮುಂದೂಡಿದರೂ ಆಗಬಹುದು.

ಅಧ್ಯಕ್ಷರು.—ಒಟ್ಟು ಎಷ್ಟು ಹಣ ಬಂದಿದೆ ಎಂದು ತಾನೇ ನೀವು ಕೇಳಿರುವುದು...

ಶ್ರೀ ಸಿ. ಬೈರೇಗೌಡ.—ಕ್ಯಾಟಗರಿ ಕೇಳಿದೆ....

ಅಧ್ಯಕ್ಷರು.—ಕ್ಯಾಟಗರಿ ಕಟ್ಟಿಕೊಂಡು ಏನಾಗಬೇಕು. ಹಣದ ಬಗ್ಗೆ ತಾನೇ ನಿಮಗೆ ಚಿಂತೆ.

ಶ್ರೀ ಸಿ. ಬೈರೇಗೌಡ.—ಅಲ್ಲ ಕ್ಯಾಟಗರಿವೈಸ್ ಕೇಳಿದ್ದೇನೆ. ಯಾವ ಯಾವ ಇಂಡಸ್ಟ್ರಿಗಳು ಮಾಡಿದ್ದಾರೆ ಏನು ಎಂಬುದು ಗೊತ್ತಾಗಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಎರಡೇ ಕ್ಯಾಟಗರಿ ಇರುವುದು, ಒಂದು ಲಾರ್ಜ್ ಮತ್ತು ಇನ್ನೊಂದು ಮೀಡಿಯಂ ಅದರ ಒಟ್ಟು ಸಂಖ್ಯೆ ೫೬ ಎಂದು ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ.— ಅವುಗಳ ಹೆಸರುಗಳನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎಸ್.ಎಂ. ಯಾಹ್ಯಾ.— ೫೬ ಇಂಡಸ್ಟ್ರಿಗಳ ಹೆಸರು ಇದೆ

ಅಧ್ಯಕ್ಷರು.— ೫೬ ಇಂಡಸ್ಟ್ರಿಗಳ ಹೆಸರನ್ನು ಓದುವುದಕ್ಕಾಗುವುದಿಲ್ಲ. You can lay it on the Table of the House.

ಶ್ರೀ ಸಿ. ಬೈರೇಗೌಡ.— ಎಷ್ಟು ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ ಎಂದು ಪ್ರಶ್ನೆ ಕೇಳಿದ್ದಕ್ಕೆ ೧೬ ಎಂದು ಹೇಳಿದ್ದೀರಿ. ಅವು ಯಾವ ವಿಧದಿಂದ ಮುಚ್ಚಲ್ಪಟ್ಟಿವೆ ಎಂದು ಹೇಳುವುದಕ್ಕಾಗುತ್ತದೆಯೇ? Which are those industries ?

SRI S. M. YAHYA.— Number of industries which are closed is 16. Machinery Manufacturing Corporation, Mysore, K. R. Mill, Mysore; Sri Ganesh Textile Mill Ltd Davanagere. Alembic Glass Industries Limited, Bangalore, Kabini Paper Mills Ltd., Nanjangud Salar Jung Sungar Mills, Munirabad, Bellary, War Parts Ltd., Mysore, Medica Paper Manufacturing company, Nanjanagud, Tungabadra Fibres Limited, Raichur. Deepak Insulated Cables, Corporation Limited, Bangalore, Karnataka Minerals and Manufacturing, Chitradurga; Devdas Udyog, Bangalore. The Modern Mills, Dharwar, Metal Box India Limited, Bangalore, Spunsilk India Limited, Chickaballapur, Chamundi Moped Limited, Tumkur

ಶ್ರೀ ಸಿ. ಬೈರೇಗೌಡ.— ಸರ್ಕಾರದವರು ಇದರಲ್ಲಿ ಹಾಕಿರತಕ್ಕ ಹಣ ಎಷ್ಟು ? ಅಂದರೆ ಈ ಕಾರ್ಖಾನೆಗಳಿಗೆ ಡೆವಲಪ್‌ಮೆಂಟ್ ಲೋನ್, ಮತ್ತೆ ಸಬ್ಸಿಡಿ ಎಂದು ಇವೆಲ್ಲ ಕೊಡುತ್ತೀರಲ್ಲ, ಇದರಲ್ಲಿ ಸರ್ಕಾರದ ದುಡ್ಡು ಎಷ್ಟು ಇನ್‌ವಾಲ್ವ್ಡ್ ಆಗಿದೆ ?

ಶ್ರೀ ಎಸ್.ಎಂ. ಯಾಹ್ಯಾ.— ಇಂಡಸ್ಟ್ರಿಯ ನಿಯಮದ ಪ್ರಕಾರ ಸಬ್ಸಿಡಿ ಹೆಚ್ಚು ಜನರಿಗೆ ಕೊಡದಿರಬಹುದು ಅಥವಾ ಸಬ್ಸಿಡಿ ಕೊಟ್ಟಿರ ಬಹುದು, ಈಗ ಅದರ ಎಲ್ಲಾ ವಿವರ ನನ್ನ ಹತ್ತಿರ ಇಲ್ಲ. ಬೇರೆ ಕೇಸ್‌ಗೆ ಕ್ವೆಶ್ಚನ್ ಕೇಳಿ...

ಅಧ್ಯಕ್ಷರು.— ಅವರ ಡಿಮ್ಯಾಂಡ್ ೧೮ ಅಥವಾ ೨೦ನೇ ತಾರೀಖಿನಂದು ಬರುತ್ತದೆ. ಆಗ ಇವೆಲ್ಲಾ ವಿಚಾರಗಳನ್ನೂ ರೈಸ್ ಮಾಡಿ...

ಶ್ರೀ ಸಿ. ಬೈರೇಗೌಡ.— ಡಿಮ್ಯಾಂಡ್‌ನಲ್ಲಿ ಸ್ಪೆಸಿಫಿಕ್ಯಾಗಿ ಹೇಳುವುದಕ್ಕಾಗುವುದಿಲ್ಲ. ರೈಸ್ ಮಾಡುವುದಿದ್ದರೆ ನಮಗೆ ಏನಾದರೂ ಇನ್‌ಫರ್ಮೇಷನ್ ಬೇಕಲ್ಲ. ಸರ್ಕಾರ ಡೆವಲಪ್‌ಮೆಂಟ್ ಲೋನ್ ಎಷ್ಟು ಕೊಡುತ್ತದೆ. ಸಬ್ಸಿಡಿ ಕೊಡುತ್ತದೆ ಇದನ್ನು ಎಷ್ಟು ಕೊಟ್ಟಿದ್ದಾರೆ, ಸರ್ಕಾರದ ಹಣ ಎಷ್ಟು ಇನ್‌ವಾಲ್ವ್ಡ್ ಆಗಿದೆ ಎನ್ನುವುದು ಅತಿ ಮುಖ್ಯವಾದ ಪ್ರಶ್ನೆ. ಮತ್ತೆ ೧೮ ಇಂಡಸ್ಟ್ರಿಗಳು ತಾವು ಸಿಕ್ ಆಗಿದೆ, ಅದನ್ನು ಕ್ಲೋಸ್‌ಮಾಡತಕ್ಕದ್ದರ ಬಗ್ಗೆ ಹೇಳಿದ್ದೀರಿ. Number of industries which cannot be revived is mentioned as two. ಇದರಲ್ಲಾದರೂ ಕೂಡ ಸರ್ಕಾರದ ಬಾಬು ಅಂದರೆ ಸರ್ಕಾರ ಕೊಟ್ಟಿರತಕ್ಕ ಹಣ ಎಷ್ಟು ಸೇರಿದೆ ?

ಶ್ರೀ ಎಸ್.ಎಂ. ಯಾಹ್ಯಾ .— ಎಲ್ಲರಿಗೂ ತಿಳಿದ ಹಾಗೆ, ಇಂಡಸ್ಟ್ರಿ ಮಾಡುವಾಗ ಆ ಕಾಲದಲ್ಲಿ ಯಾವ ಸ್ಕೀಮ್ ಇತ್ತು ಅದರ ಪ್ರಕಾರ ಕೊಡುತ್ತಿದ್ದರು. ಅದಕ್ಕೆ ಬೇಕಾದಷ್ಟು ಫ್ಯಾಕ್ಟರ್ಸ್ ಇರುತ್ತದೆ. ಡೆವಲಪ್‌ಮೆಂಟ್ ಲೋನ್ ಇರಬಹುದು, ಸಬ್ಸಿಡಿ ಇರಬಹುದು, ಸೆಂಟ್ರಲ್ ಗವರ್ನಮೆಂಟಿನ ಸಬ್ಸಿಡಿ ಇರಬಹುದು, ಅದೆಲ್ಲಾ ವಿವರ ನಮ್ಮ ಹತ್ತಿರ ಇಲ್ಲ.

MR. SPEAKER.— You can send a Notice for half-an-hour discussion.

ಶ್ರೀ ಸಿ. ಬೈರೇಗೌಡ.— ಆಗಬಹುದು

ಶ್ರೀಮತಿ ದಮಯಂತಿ ಬೋರೇಗೌಡ.— ಮಾನ್ಯ ಅಧ್ಯಕ್ಷರೇ, ಕೆ. ಆರ್. ಮಿಲ್ ಅನ್ನು ಪಂತ್ರೆ ಯಾವಾಗ ಪ್ರಾರಂಭ ಮಾಡುತ್ತಾರೆ, ಏನು ತೊಂದರೆ ಇದೆ ಎಂದು ಸಚಿವರು ತಿಳಿಸಬೇಕು.

ಶ್ರೀ ಎಸ್. ಎಂ. ಯಾಹ್ಯಾ.— ಪ್ರಾರಂಭ ಮಾಡುವ ಬಗ್ಗೆ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತದೆ.

ಶ್ರೀ ಹರ್ಷಕುಮಾರ್ ಗೌಡ.— ಮಾನ್ಯ ಅಧ್ಯಕ್ಷರೇ, ಈಗಾಗಲೆ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಮೈಸೂರು ಜಿಲ್ಲೆಯಲ್ಲಿ ಮೂರು ಪ್ರಮುಖ ಕಾರ್ಖಾನೆಗಳು ಮುಚ್ಚಿವೆ, ಮೈಸೂರಿನಿಂದ ಆರ್ಥಿಕವಾಗಿ ಹಿಂದುಳಿದ ಜಿಲ್ಲೆಯಲ್ಲಿ ಮೂರು ಕಾರ್ಖಾನೆಗಳು ಮುಚ್ಚಿರಬೇಕಾದರೆ ಸರ್ಕಾರ ಇದರ ಬಗ್ಗೆ ಸರಿಯಾಗಿ, ಶೀಘ್ರವಾಗಿ ಯಾವಾಗ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಯಾಹ್ಯಾ.— ಅದಕ್ಕೆ ಬೇಕಾದಷ್ಟು ಪ್ರಯತ್ನಗಳು ನಡೆಯುತ್ತಿವೆ.